ಎಲೆಯ ಮೇಲಿಟ್ಟ ದೀಪಗಳನ್ನು ನದಿಯಲ್ಲಿ ತೇಲಿ ಬಿಡುವವರ ಉತ್ಸಾಹ, ಅದು ಎಲ್ಲಿಯ ವರೆಗೆ ತೇಲಬಹುದು ಎನ್ನುವ ಅವರ ಕಾತುರ ನೋಡಿ ನನಗೂ ಆಸೆಯಾಗಿತ್ತು. ಅದೊಂದು ರೀತಿಯ ಸಮೂಹ ಸನ್ನಿ. ಆದರೆ, ಆಕಾಶ ತಡೆದಿದ್ದ. ''ಹೀಗಂದುಕೊಂಡೇ ಎಲ್ಲರೂ ಮತ್ತೆಮತ್ತೆ ಗಂಗೆಯನ್ನು ಹೊಲಸು ಮಾಡುವುದು'' ಎಂದಿದ್ದ. ಭಕ್ತಿ, ಶ್ರದ್ಧೆ ಎಂಬ ಕಾರಣಕ್ಕಾಗಿ ಸಂಜೆಯ ಮಂದಬೆಳಕಿನಲ್ಲಿ ಸಾಲುಸಾಲಾಗಿ ದೀಪಗಳನ್ನು ತೇಲಿಬಿಡುವ ಸಹಸ್ರ ಸಹಸ್ರ ಜನರಿಗೆ ತಾವು ಗಂಗೆಯನ್ನು ಇನ್ನಷ್ಟು ಮಲಿನಗೊಳಿಸುತ್ತಿದ್ದೇವೆ ಎನ್ನುವ ಅರಿವೇ ಇರುವುದಿಲ್ಲ. ಮೆಟ್ಟಿಲುಗಳ ಮೇಲೆ ಕುಳಿತು ರಭಸದಿಂದ ಹರಿಯುವ ಗಂಗೆಯನ್ನು ನೋಡಿದಾಗ, ಇಷ್ಟೇಕೆ ಕಪ್ಪು ನೀರು? ಎಂದು ಸಂಕಟವಾಗುತ್ತದೆ. ಎಲ್ಲರ ಪಾಪ ತೊಳೆಯುತ್ತ ತೊಳೆಯುತ್ತ ಇಷ್ಟೊಂದು ಹೊಲಸನ್ನು ತನ್ನ ಮಡಿಲಲ್ಲಿ ಹಾಕಿಕೊಂಡಳೇ ಗಂಗೆ! ಎನಿಸುತ್ತದೆ. ನಾನೂ ಒಂದು ದೀಪವನ್ನು ತೇಲಿಸಿ ಅವಳನ್ನು ಇನ್ನೂ ಮಲಿನಗೊಳಿಸಲು ಕಾರಣವಾಗದ ಹಾಗೆ ತಡೆದ ಆಕಾಶನ ಬಗ್ಗೆ ಗೌರವ ಮೂಡಿತ್ತು. ಕೊನೆಗೆ ಗಂಗಾ ಆರತಿ ಪ್ರಾರಂಭವಾದಾಗ ಇಡೀ ವಾತಾವರಣದಲ್ಲಿ ಒಂಥರಾ ಭಕ್ತಿಯ ಉನ್ಮಾದ ಕಾಣಿಸಿಕೊಂಡಿತ್ತು. ಗಂಗಾ ಮಯ್ಯಾ ಅಂದರೆ ಗಂಗಾಮಾಯಿ, ಸೂರ್ಯ ಚಂದ್ರರು ಇರುವ ವರೆಗೆ ಅವಳ ಒಡಲಲ್ಲಿ ನೀರು ಬತ್ತುವುದಿಲ್ಲ, ಅದು ಹರಿಯುತ್ತಲೇ ಇರುತ್ತದೆ ಎನ್ನುವ ಅರ್ಥದ ಹಾಡಿನೊಂದಿಗೆ ನದಿ ದಂಡೆಯ ಎಲ್ಲ ದೇವಸ್ಥಾನಗಳಿಂದ ಅವಳಿಗೆ ಆರತಿ ಸಲ್ಲುತ್ತದೆ. ಆರತಿಯ ಕೆಂಪು, ಹಳದಿ ಬೆಳಕು ಗಂಗೆಯ ನೀರಿನಲ್ಲಿ ಪ್ರತಿಫಲಿಸುತ್ತ ವೃತ್ತಾಕಾರದಲ್ಲಿ ತಿರುಗುತ್ತದೆ. ಅದನ್ನು ನೋಡುವುದೇ ಒಂದು ದಿವ್ಯ ಅನುಭೂತಿ. ಆರತಿ ಮುಗಿದ ನಂತರ ಸಹಸ್ರಾರು ಜನ ಎದ್ದು ಹೊರಡುತ್ತಾರೆ. ನೋಡನೋಡುತ್ತಲೇ ಪೌಡಿ ಖಾಲಿಯಾಗುತ್ತದೆ. ಅಲ್ಲಿಯೇ ಸ್ವಲ್ಪ ಹೊತ್ತು ನಿಂತ ನಾವು ಅವಳ ಹರಿಯುವ ವೇಗವನ್ನೇ ನೋಡುತ್ತಿದ್ದೆವು. ಎಂಥ ರಭಸದ ಸೆಳವು! ಇಂಥ ಸೆಳವಿರುವ ನೀರಿನಲ್ಲಿ ಮುಳುಗಿ ಸ್ನಾನ ಮಾಡುವುದಿರಲಿ, ಒಂದೇ ಒಂದು ಮೆಟ್ಟಿಲಿಳಿದು ಕಾಲುಗಳನ್ನು ಒದ್ದೆ ಮಾಡಿಕೊಳ್ಳುವುದು ಕೂಡ ಸಾಧ್ಯವಿಲ್ಲ ಎನಿಸಿಬಿಟ್ಟಿತು. ಸುಮ್ಮನೇ ಮೇಲೆ ಹತ್ತಿಬಂದ ನನ್ನನ್ನು ನೋಡಿ ಆಕಾಶ ನಕ್ಕಿದ್ದ. ''ನೀನು ಕಾಲಿಟ್ಟು ನೋಡಿದೆಯಾ?'' ಎಂದಿದ್ದಕ್ಕೆ, ''ಇಲ್ಲ, ನಾನು ನನ್ನ ಹೊಲಸು ಕಾಲುಗಳನ್ನು ಪವಿತ್ರ ಗಂಗೆಯಲ್ಲಿ ಇಳಿಸುವುದಿಲ್ಲ'' ಎಂದಿದ್ದ. ನಾನು ಪ್ರೀತಿಯಿಂದ ಅವನ ತೋಳುಗಳನ್ನು ತಬ್ಬಿ ಮುನ್ನಡೆದಿದ್ದೆ.

ಗಂಗೆ, ಹಿಮಾಲಯದಲ್ಲಿ ಹುಟ್ಟಿದಾಗ, ಬೆಟ್ಟದಿಂದ ಇಳಿಯುವಾಗ, ಋಷಿಕೇಶದಲ್ಲಿ ಸಳಸಳನೇ ಹರಿಯುವಾಗ ಅದೆಷ್ಟು ನಿರ್ಮಲವಾಗಿರುತ್ತಾಳೆ! ಋಷಿಕೇಶದಲ್ಲಿ ನೋಡಿದರೆ ಸಂತಸವಾಗುತ್ತದೆ. ಮುಂದೆ ಹರಿದ್ವಾರದಲ್ಲಿ ಇಳಿಯುತ್ತ ಬಂದಂತೆ ಮಲಿನವಾಗುತ್ತ ಹೋಗುತ್ತಾಳೆ. ಕೊಳೆಯಾಗುತ್ತಾಳೆ. ಆದರೆ, ಅವಳ ವೇಗ, ಅವಳ ಆಳ, ಅವಳ ವಿಸ್ತಾರ ಎಲ್ಲವೂ ಅಗಾಧವಾದದ್ದು. ಅವಳು ಹೊಲಸು, ಅವಳು ಅಪವಿತ್ರ ಎಂದು ಕ್ಷಣಮಾತ್ರವೂ ಅನಿಸದು. ಹರಿದ್ವಾರದಲ್ಲಿ ಹರಿದಾಡುತ್ತಿದ್ದ ನನ್ನ ಮನಸ್ಸನ್ನು ಪುಷ್ಪಾಳ ಧ್ವನಿ ಮರಳಿ ನಾನು ಕುಳಿತಿರುವ ಅಪಾರ್ಟ್‌ಮೆಂಟಿನ ನೆಲದ ಮೇಲೆ ತಂದು ಒಗೆಯಿತು.

''ಎಷ್ಟ ಮಂದಿ ಎಷ್ಟ ವರ್ಷದಿಂದ ಅಕಿನ್ನ ಹೊಲಸ ಮಾಡ್ಲಿಕತ್ತಾರ! ಅಕಿನೂ ಎಲ್ಲಾರ ಪಾಪಾ ಎಲ್ಲಾರ ಹೊಲಸು ತೊಳೀತಾಳ, ಆದ್ರ ಅಕಿನ್ನ ಯಾರೂ ಹೊಲಸು, ಅಪವಿತ್ರ ಅನ್ನಂಗಿಲ್ಲ. ಯಾಕಂದ್ರ ಅಕಿ ಎಲ್ಲಾರ ಪಾಪ ತೊಳ್ಯಾಕಿ. ಅಕಿ ಯಾವಾಗ್ಲೂ ಪವಿತ್ರ ಇದ್ರನ ಮಂದೀ ಪಾಪ ತೊಳೀಬೌದು. ಹಂಗs ನಾವೂ ಅಂತ ನನಗ ಎಷ್ಟೋ ಸಲ ಅನಸ್ತದ. ನಾವೂ ಈ ಸಮಾಜದೊಳಗಿನ ಪಾಪಾ ತೊಳೀತೇವಿ. ಈ ಸಮಾಜದೊಳಗ ಕಾಮುಕರು, ಪಾಖಂಡಿಗೋಳು ಎಷ್ಟು ಜನಾ ಇರ್ತಾರ. ಎಷ್ಟೋ ಮಂದೀದು ಮದವಿನs ಆಗಂಗಿಲ್ಲ. ಇನ್ನ ಕೆಲವು ಮದವ್ಯಾಗಿ ಮನಿಯೊಳಗ ಸತಿ ಸಾವಿತ್ರಿ ಹಂತಾ ಹೆಂಣ್ತಿ ಇದ್ರೂ ಸಾಕಾಗಲಾರದಂಥಾ ಸುಡಗಾಡ ರಣ ಹಸಿವಿ ಇದ್ದಾವು ಇರ್ತಾರ. ಇವ್ರೆಲ್ಲಾ ಒಂದಿಷ್ಟು ಖರ್ಚುಗಳನ್ನು ಮಾಡಿ ಸುಖಾ ಅನಭವಿಸಿ ಹೋಗ್ತಾರಂತ ಓಣ್ಯಾಗ ಹೆಣ್ಣುಮಕ್ಕಳು ತಲಿ